**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು:</u>**

**<u>ಮುಂದುವರೆದ ಮುಖ್ಯವಿಚಾರಣೆ ವಾದಿಗಳ ಪರ ಶ್ರೀ ಜಿ ಬಿ ಎಸ್ ವಕೀಲರಿಂದ</u>**

ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿದ್ದೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರುತಿಸಿಕೊಂಡಿರುತ್ತೇನೆ:

ನಿಪಿ.1 ದಿ: 15.05.1984 ನ ದೃಡೀಕೃತ ನಕಲಿನ ಖರೀದಿ ಪತ್ರ
ನಿಪಿ.2 ಮ್ಯುಟೇಶನ್ ರಿಜಸ್ಟರ್ ಎಕ್ಸಟ್ರಾಕ್ಟ
ನಿಪಿ.3 ಪೌತಿ ಬದಲಾವಣೆ ರಿಪೋರ್ಟ
ನಿಪಿ.4 ಮಿಸಿಲೇನಿಯಸ್ ರಿಜಿಸ್ಟರ್
ನಿಪಿ.5 ರುಣಭಾರ ಪ್ರಮಾಣಪತ್ರ
ನಿಪಿ.6 ರಿಂದ 11. ಆರ್ ಟಿ ಸಿ ಗಳು
ನಿಪಿ.12 ನೋಟೀಸು
ನಿಪಿ.12(ಎ) ಮತ್ತು (ಬಿ) ಅಂಚೆ ರಶೀದಿ
ನಿಪಿ.12 (ಸಿ) ಮತ್ತು (ಡಿ) ಅಂಚೆ ಸ್ವೀಕೃತಿ

**<u>ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಜಿ ಬಿ ಪಿ ವಕೀಲರಿಂದ:</u>**

ನನ್ನ ತಂದೆ ಹೆಸರು ಬಸಪ್ಪ ಎಂದರೆ ಹೌದು. ನನ್ನ ತಂದೆಗೆ ಮೂರು ಜನ ಮಕ್ಕಳು ಅವರು ಗುರುಸಿದ್ದಪ್ಪ , ಕಲ್ಲಿಂಗಪ್ಪ ಮತ್ತು ನಾನು. ನನ್ನ ಅಣ್ಣ ಕಲ್ಲಿಂಗಪ್ಪ 1 ನೇ ಪ್ರತಿವಾದಿಯ ಗಂಡ ಎಂದರೆ ಹೌದು. 2 ನೇ ವಾದಿ ನನ್ನ ಅಣ್ಣ ಗುರುಸಿದ್ದಪ್ಪನ ಹೆಂಡತಿ ಎಂದರೆ ಹೌದು.

3 ನೇ ವಾದಿ ಗುರುಸಿದ್ದಪ್ಪನ ಮಗ ಎಂದರೆ ಹೌದು. ಕಲ್ಲೇಶ ನನ್ನ ಅಣ್ಣ ಕಲ್ಲಿಂಗಪ್ಪನ ಮಗ ಎಂದರೆ ಹೌದು. ದಾವಾ ಹಾಕಲು ವಕೀಲರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ದಾವಾ ಎ ಶೆಡ್ಯೂಲ್ ನ ಆಸ್ತಿಗಳು ನನಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಹೌದು. ದಾವಾ ಬಿ ಶೆಡ್ಯೂಲ್ ನ ಆಸ್ತಿಗಳು ಕೂಡ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ . ಅವು ಕೊಂಡುಕೊಂಡ ಆಸ್ತಿಗಳು ಎಂದು ಹೇಳುತ್ತಾರೆ. ದಾವಾ ಸಿ ಶೆಡ್ಯೂಲ್ ಐಟಂ.ನಂ.1 ಆಸ್ತಿ ಕೂಡ ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ದಾವಾ ಬಿ ಶೆಡ್ಯೂಲ್ ನಲ್ಲಿ ತೋರಿಸಿದ ಆಸ್ತಿಗಳು ಪಿತ್ರಾರ್ಜಿತ ಆಸ್ತಿನೋ ಅಥವಾ ಖರೀದಿ ಮಾಡಿದ ಆಸ್ತಿನೋ ಎಂದರೆ ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳುತ್ತಾರೆ. ಪಿತ್ರಾರ್ಜಿತ ಆಸ್ತಿಗಳು ಪಾಲುವಿಬಾಗ ಮಾಡಿಕೊಂಡಿದ್ದ ಬಗ್ಗೆ ಯಾವುದೇ ದಾಖಲಾತಿ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ ಹಾಜರುಪಡಿಸಿರುತ್ತೇನೆ. ದಾವಾ ಎ, ಬಿ ಮತ್ತು ಐಟಂ ನಂ.1 ನ ಸಿ ಶೆಡ್ಯೂಲ್ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಸಮನಾದ ಹಕ್ಕು ಇದೆ ಎಂದರೆ ಹೌದು. ಸಿ ಶೆಡ್ಯೂಲ್ ನಲ್ಲಿ ಐಟಂ ನಂ.1 ಆಸ್ತಿ ಬಿಟ್ಟು ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ಹೌದು. ಸಿ ಶೆಡ್ಯೂಲ್ ನಲ್ಲಿ ಐಟಂ ನಂ.2 ಆಸ್ತಿಯಲ್ಲಿ 5 ಎಕರೆ ಮಾತ್ರ ಇದೆ ಎಂದರೆ ಸರಿಯಲ್ಲ 8 ವರೆ ಎಕರೆ ಇದೆ ಎಂದು ಹೇಳುತ್ತಾರೆ. ದಾವಾ ಸಿ ಶೆಡ್ಯೂಲ್ ಆಸ್ತಿ ಪ್ರತಿವಾದಿಗೆ ಬಂದಿರುವ ಆಸ್ತಿ ಅಂತ ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಹೌದು. ಸರ್ವೆ ನಂ.68/1 ರಲ್ಲಿ 5 ಎಕರೆ 26 ಗುಂಟೆ ಜಮೀನುನಲ್ಲಿ ಬಾಗ ಬೇಕು ಅಂತ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.68/1 ನಲ್ಲಿ ನನಗೆ ಬಾಗ ಇಲ್ಲವಾ ಎಂದರೆ ಅದು ನನ್ನ ಅಜ್ಜನ ಆಸ್ತಿ ಎಂದು ಹೇಳುತ್ತಾರೆ. ಸರ್ವೆ ನಂ.58, 59 ಮತ್ತು 80/2 ರಲ್ಲಿ ಭಾಗ ಬೇಕು ಅಂತ ಹಾಕಿಲ್ಲ ಎಂದರೆ ಹೌದು. ಸರ್ವೆ ನಂ.80/2 ರಲ್ಲಿ ನನಗೆ ಒಂದು ಎಕರೆ ಬಂದಿದೆ ಅಂತ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.80/1 ರಲ್ಲಿ 10 ಎಕರೆ ಜಮೀನು 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಕಲ್ಲಿಂಗಪ್ಪ ಇಬ್ಬರು ಸೇರಿ ಕ್ರಯಪತ್ರದ ಮೂಲಕ ಶಾರದಮ್ಮ ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಅದು ಸುಳ್ಳು. ಕ್ರಯಪತ್ರ ನೋಡಿಲ್ಲ ಎಂದರೆ ಹೌದು. ಸರ್ವೆ ನಂ.80/1 ರಲ್ಲಿ 1 ನೇ ಪ್ರತಿವಾದಿ 5 ಎಕರೆ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನ್ನ ತಂದೆ ಮಾರಾಟ ಮಾಡಿರುವುದು ನನಗೆ ಗೊತ್ತು ಎಂದು ಹೇಳುತ್ತಾರೆ. ಸರ್ವೆ ನಂ.80/1 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ

ಕಲ್ಲಿಂಗಪ್ಪ ನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಕಲ್ಲಿಂಗಪ್ಪ ತಂದೆ ಬಸಪ್ಪ ಎಂದರೆ ನನ್ನ ಅಣ್ಣ ಎಂದರೆ ಹೌದು. ಸರ್ವೆ ನಂ.81/1 ರ 10 ಎಕರೆ ಜಮೀನನ್ನು ಖರೀದಿ ಮಾಡುವ ಸಲುವಾಗಿ ನನ್ನ ಅಣ್ಣ ಕಲ್ಲಿಂಗಪ್ಪ ಮತ್ತು ಆತನ ಹೆಂಡತಿ ಮಲ್ಲಮ್ಮ ಇಬ್ಬರು ಕೂಡ ಸರ್ವೆ ನಂ. 56/1 ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾವು ಯಾರು ಮನೆಯಲ್ಲಿ ಇರಲಿಲ್ಲ ಮನೆಯ ಜವಾಬ್ದಾರಿ ನನ್ನ ಅಣ್ಣ ಕಲ್ಲಿಂಗಪ್ಪನಿಗೆ ಕೊಟ್ಟಿದ್ದು ಆ ಸಮಯದಲ್ಲಿ ಅವರು ನಮಗೆ ಯಾರಿಗೂ ಗೊತ್ತಿಲ್ಲದೆ ಮಾರಾಟ ಮಾಡಿರುತ್ತಾರೆ ಈ ವಿಚಾರ ನಮಗೆ ಇತ್ತೀಚೆಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ.56/1 ಆಸ್ತಿ ಮೊದಲು 1 ನೇ ಪ್ರತಿವಾದಿಯ ತಂದೆಗೆ ಸೇರಿತ್ತು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಅಜ್ಜನಿಗೆ ಸೇರಿದ ಆಸ್ತಿ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ಅವರ ತಂದೆ ಸರ್ವೆ ನಂ.56/1 ಆಸ್ತಿ ಕ್ರಯಪತ್ರದ ಮೂಲಕ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡನಿಗೆ ಕೊಟ್ಟಿದ್ದಾರೆ ಎಂದರೆ ಅದೆಲ್ಲಾ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಕಟ್ಟಿಗೆಹಳ್ಳಿ ಸರ್ವೆ ನಂ.56/1 ಆಸ್ತಿ ಕೆ ಶಿವಮೂರ್ತಯ್ಯನಿಗೆ ಮಾರಾಟ ಮಾಡಿದ್ದಾರೆ ಎಂದರೆ ಅದೆಲ್ಲಾ ಗೊತ್ತಿಲ್ಲ. ಆ ಮಾರಾಟ ಮಾಡಿದ ಹಣದಿಂದ ನಲ್ಲಿಕಟ್ಟೆ ಸರ್ವೆ ನಂ.80/1 ಆಸ್ತಿ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.80/1 ರಲ್ಲಿ 1 ನೇ ಪ್ರತಿವಾದಿ 5 ಎಕರೆ ಗಂಗಮ್ಮನಿಗೆ ಮಾರಾಟ ಮಾಡಿದ್ದಾರೆ ಎಂದರೆ ನನ್ನ ತಂದೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂ.80/1 ರಲ್ಲಿ ಇನ್ನೂ 5 ಎಕರೆ ಜಮೀನು ಉಳಿದಿದೆ ಎಂದರೆ ಹೌದು. ಮಾರಾಟ ಮಾಡಿ ಉಳಿದ ಸರ್ವೆ ನಂ.80/1 ಜಮೀನಿನಲ್ಲಿ ಪ್ರತಿವಾದಿಗಳು ಈಗಲೂ ಸ್ವಾದೀನಾನುಭವ ಇದ್ದಾರೆ ಎಂದರೆ ಹೌದು. ಅವರ ಸ್ವಾದೀನಾನುಭವಕ್ಕೆ ನಾವು ಎಂದೂ ತಂಟೆ ತಕರಾರು ಮಾಡಿಲ್ಲ ಎಂದರೆ ಹೌದು. ಈಗ ಪ್ರತಿವಾದಿಗಳ ಹತ್ತಿರ ಇರುವ ಸರ್ವೆ ನಂ.80/1 ರಲ್ಲಿ 5 ಎಕರೆ ಜಮೀನಿಗೆ ನಮ್ಮ ತಂಟೆ ತಕರಾರು ಇಲ್ಲ ಎಂದರೆ ಹೌದು. 1 ನೇ ಪ್ರತಿವಾದಿ ಹತ್ತಿರ ಇರುವ ಐಟಂ ನಂ.1 ರ ಸಿ ಶೆಡ್ಯೂಲ್ 5 ಎಕರೆ 26 ಗುಂಟೆ ಆಸ್ತಿಗೂ ನಮ್ಮ ತಕರಾರು ಇಲ್ಲ ಎಂದರೆ ಹೌದು.

ಈ ಹಿಂದೆ 1 ನೇ ಪ್ರತಿವಾದಿ ಎ ಸಿ ನ್ಯಾಯಾಲಯದಲ್ಲಿ ಆರ್ ಎ 134/2005.06 ರಂತೆ ಕೇಸು ಹಾಕಿದ್ದರು ಎಂದರೆ ಹೌದು. ಆ ಕೇಸು 28.02.2009 ರಂದು ತೀರ್ಮಾನ

ಆಗಿದೆ ಎಂದರೆ ಹೌದು. ನನ್ನ ತಂದೆ ಬಸಪ್ಪನ ತಂದೆ ಹೆಸರು ಕಲ್ಲಿಂಗಪ್ಪ ಎಂದರೆ ಹೌದು. 1 ನೇ ಪ್ರತಿವಾದಿಯ ಗಂಡ ಕಲ್ಲಿಂಗಪ್ಪ ಈಗ ಜೀವಂತ ಇಲ್ಲ ಎಂದರೆ ಹೌದು. ಕಲ್ಲಿಂಗಪ್ಪ ತೀರಿಕೊಂಡ ಮೇಲೆ ನಾನು ಮತ್ತು ಗುರುಸಿದ್ದಪ್ಪ ಇಬ್ಬರು ಸೇರಿ ಪಿತ್ರಾರ್ಜಿತ ಆಸ್ತಿ ಅಂತ ಹೇಳಿ ಪೌತಿ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಹೌದು. ಆ ಪೌತಿ ಖಾತೆ ಐ ಎಪ್ ಸಿ 3/1990.1991 ಆಗಿರುತ್ತದೆ ಎಂದರೆ ಹೌದು. ಪೌತಿ ಖಾತೆ ಗಾಗಿ ಸುಳ್ಳು ಮಾಹಿತಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಸುಳ್ಳು ಮಾಹಿತಿ ಕೊಟ್ಟು ಪೌತಿ ಖಾತೆ ಮಾಡಿಕೊಂಡಿರುತ್ತೇವೆ ಅಂತ 1 ನೇ ಪ್ರತಿವಾದಿ ಎಸಿ ನ್ಯಾಯಾಲಯದ ಮುಂದೆ ಅಪೀಲು ಹಾಕಿದ್ದಾರೆ ಎಂದರೆ ನಾವು ಸುಳ್ಳು ಮಾಹಿತಿ ನೀಡಿಲ್ಲ ಎಂದು ಹೇಳುತ್ತಾರೆ. ಆ ಅಪೀಲು ಮಲ್ಲಮ್ಮನ ಪರವಾಗಿ ತೀರ್ಮಾನ ಆಗಿದೆ ಎಂದರೆ ನಾವು ಆ ಕಾಲದಲ್ಲಿ ಆಸ್ಪತ್ರೆ ಮತ್ತು ಕೇಸಿಗೆ ಹಾಜರು ಆಗಿಲ್ಲ ಆ ಕಾರಣದಿಂದ ಮಲ್ಲಮ್ಮನ ಹೆಸರಿಗೆ ಆಗಿರಬಹುದು ಎಂದು ಹೇಳುತ್ತಾರೆ. ಎಸಿ ಆದೇಶದ ಪ್ರಕಾರ 1 ನೇ ಪ್ರತಿವಾದಿ ಹೆಸರಿಗೆ ಆರ್ ಆರ್ ಟಿ ಸಿ ಆರ್ 9/2010.11 ರಂತೆ ಖಾತೆ ಮಾಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹೆಸರಿಗೆ ಆ ಜಮೀನು ಇದ್ದ ಬಗ್ಗೆ ಮಾಹಿತಿ ಇದೆಯೋ ಇಲ್ಲವೊ ಎಂದರೆ ಇಲ್ಲ. ಆ ಆದೇಶ ಇಲ್ಲಿಯತನಕ ನಾನು ಪ್ರಶ್ನಿಸಿಲ್ಲ ಎಂದರೆ ಹೌದು ಕಾರಣ ನಮಗೆ ಆ ಕಾಲಕ್ಕೆ ನ್ಯಾಯಾಲಯಕ್ಕೆಲ್ಲಾ ಹೋಗಲು ಆಗಲಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲವಕಾಶ ಕೋರುತ್ತಾರೆ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**